## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 60 ಹೈಕಕೋ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 06.06.2020

### ಸುತ್ತೋಲೆ

ವಿಷಯ: ರಾಜ್ಯ ಮಟ್ಟದ ಕಛೇರಿ ಅಥವಾ ಸಂಸ್ಥೆಗಳಲ್ಲಿ ಶೇಕ ಡ 8 ರಂತೆ ರಾಜ್ಯ ಮಟ್ಟದ ಮೀಸಲಾತಿ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಸಿಆಸುಇ 78 ಹೈಕಕೋ 2014, ದಿನಾಂಕ 22.05.2015,

*****

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರ ಕಂಡಿಕೆ 13 ರಲ್ಲಿ ರಾಜ್ಯ ಮಟ್ಟದ ಕಛೇರಿ ಅಥವಾ ಸಂಸ್ಥೆಗಳಲ್ಲಿ ಶೇಕಡಾ 8 ರಷ್ಟು ಹುದ್ದೆಗಳನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸುವಂತೆ ತಿಳಿಸಲಾಗಿರುತ್ತದೆ. ಸದರಿ ಆದೇಶದ ಕಂಡಿಕೆ 2(1)(ಐ)ರಲ್ಲಿ "ರಾಜ್ಯ ಮಟ್ಟದ ಕಛೇರಿ ಅಥವಾ ಸಂಸ್ಥೆ" ಎಂಬ ಪದದ ಅರ್ಥವಿವರಣೆಯನ್ನು ನೀಡಲಾಗಿದ್ದು, ಈ ಕೆಳಕಂಡಂತಿರುತ್ತದೆ.

> **"ರಾಜ್ಯ ಮಟ್ಟದ ಕಛೇರಿ ಅಥವಾ ಸಂಸ್ಥೆ" ಎಂದರೆ, ರಾಜ್ಯಕ್ಕೆ ಸಮಗ್ರವಾಗಿ ಸೇವೆ ಸಲ್ಲಿಸುತ್ತಿರುವ ಅಥವಾ ಅಧಿಕಾರವ್ಯಾಪ್ತಿಯ, ರಾಜ್ಯಕ್ಕೆ ಸಮಗ್ರವಾಗಿ ವಿಸ್ತಾರವಾಗುವ ಅಥವಾ ರಾಜ್ಯದ ರಾಜಧಾನಿ ಪ್ರದೇಶಕ್ಕೆ ಸೇವೆ ಸಲ್ಲಿಸುತ್ತಿರುವ ಅಥವಾ ಸಮಗ್ರ ರಾಜ್ಯಕ್ಕೆ ಸೇವೆ ಸಲ್ಲಿಸುತ್ತಿರುವ ಒಂದು ಕಛೇರಿ ಅಥವಾ ಸಂಸ್ಥೆ ಅಥವಾ ಎಲ್ಲಾ ಮೇಲೆ ಹೇಳಿದ ಸಂಸ್ಥೆಗಳ ಉದ್ದೇಶಗಳನ್ನು ನೆರವೇರಿಸಲು ತರುವಾಯದ ದಿನಾಂಕದಲ್ಲಿ ಸೃಜಿಸಿರಬಹುದಾದ ಯಾವುದೇ ಇತರ ಹೊಸ ಕಛೇರಿ:"**

ಮೇಲಿನ ಅರ್ಥವಿವರಣೆಯಂತೆ ರಾಜ್ಯ ರಾಜಧಾನಿಯ ಕೇಂದ್ರ ಸ್ಥಾನದಲ್ಲಿರುವಂತಹ ಒಂದು ಇಲಾಖೆಯ ಕೇಂದ್ರ ಕಛೇರಿ (ಸದರಿ ಕೇಂದ್ರ ಕಛೇರಿಯು ರಾಜ್ಯದ ಯಾವ ಜಿಲ್ಲೆಯಲ್ಲಿದ್ದರೂ ಸಹ) ಹಾಗೂ ರಾಜ್ಯ ರಾಜಧಾನಿಯಾದ ಬೆಂಗಳೂರಿನಲ್ಲಿರುವ ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇರುವಂತಹ ಆಯಾ ಇಲಾಖೆಗಳಿಗೆ ಸಂಬಂಧಿಸಿದ ಎಲ್ಲಾ ಉಪ/ಅಧೀನ ಕಛೇರಿಗಳಲ್ಲಿ ಮಂಜೂರಾದ ಎಲ್ಲಾ ವೃಂದದ ಹುದ್ದೆಗಳನ್ನು ಕೇಂದ್ರ ಕಛೇರಿಯ ಹುದ್ದೆಗಳೊಂದಿಗೆ ಒಟ್ಟುಗೂಡಿಸಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಶೇಕಡಾ 8 ರಷ್ಟು ರಾಜ್ಯ ಮಟ್ಟದ ಮೀಸಲಾತಿಯನ್ನು ನಿಗಧಿಪಡಿತಕ್ಕದ್ದು.

ಮುಂದುವರೆದು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳ ಎಲ್ಲಾ ಉಪ / ಅಧೀನ ಕಛೇರಿಗಳಲ್ಲಿ ಮಂಜೂರಾದ ಎಲ್ಲಾ ವೃಂದದ ಹುದ್ದೆಗಳನ್ನು ಕೇಂದ್ರ ಕಛೇರಿಯ ಹುದ್ದೆಗಳೊಂದಿಗೆ ಒಟ್ಟುಗೂಡಿಸಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಶೇಕಡಾ 8 ರಷ್ಟು ರಾಜ್ಯ ಮಟ್ಟದ ಮೀಸಲಾತಿಯನ್ನು ನಿಗಧಿಪಡಿಸುವಂತೆ ಸ್ಪಷ್ಟೀಕರಿಸಲಾಗಿದೆ.

V. Akkamahadevi 06/06/2020

(ವಿ. ಅಕ್ಕಮಹಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
(ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು,
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.

.............2

3. ಪ್ರಾದೇಶಿಕ ಆಯುಕ್ತರುಗಳು ಕಲಬುರಗಿ ವಿಭಾಗ / ಬೆಂಗಳೂರು ವಿಭಾಗ.
4. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
6. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ / ಕಲಬುರಗಿ / ರಾಯಚೂರು / ಕೊಪ್ಪಳ/ ಯಾದಗಿರಿ / ಬಳ್ಳಾರಿ / ಬೀದರ್ ಜಿಲ್ಲೆ.
7. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ / ಕಲಬುರಗಿ / ರಾಯಚೂರು / ಕೊಪ್ಪಳ/ ಯಾದಗಿರಿ / ಬಳ್ಳಾರಿ / ಬೀದರ್ ಜಿಲ್ಲೆ.
8. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಸಹಾಯಕ ಆಯುಕ್ತರುಗಳು.
9. ಎಲ್ಲಾ ವಿಶ್ವ ವಿದ್ಯಾಲಯಗಳ ಕುಲಸಚಿವರುಗಳು.
10. ಹೆಚ್ಚುವರಿ ಪ್ರತಿ / ಶಾಕಾ ರಕ್ಷಾ ಕಡತ.